**ಹೊಳೆನರಸೀಪುರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ**

**ಸಿ.ಸಿ. ನಂ.839/2018**

ಪಿರ್ಯಾದುದಾರರು : ಸರ್ಕಾರದ ಪರವಾಗಿ- ಹೊಳೆನರಸೀಪುರ ನಗರ ಪೋಲಿಸರು

**ವಿರುದ್ಧ**

ಆಪಾದಿತರು : 1. ರತ್ನ ಕೊಂ ದೇವರಾಜು, 32 ವರ್ಷ,
2. ದೇವರಾಜು ಬಿನ್ ಗೋವಿಂದಯ್ಯ, 35 ವರ್ಷ,

ಇಬ್ಬರೂ ಆಶ್ರಯ ಬಡವಾಣೆ, ಹೊಳೆನರಸೀಪುರ ಟೌನ್.

**:- ದೋಷಾರೋಪಣೆ :-**

ಶ್ರೀ **ಆರ್ ಮಹೇಶ. ಬಿ.ಎ.ಎಲ್., ಎಲ್ಎಲ್.ಬಿ.,** ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳೆನರಸೀಪುರ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಹೊಳೆನರಸೀಪುರ ನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಹೊಳೆನರಸೀಪುರ, ವಾರ್ಡ್ 17, ಆಶ್ರಯ ನಿವೇಶನ 1150 ಹತ್ತಿರ, ದಿನಾಂಕ 16/1/2016ರಂದು ಮದ್ಯಾಹ್ನ 3 ಗಂಟೆ ಸಮಯಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಅಕ್ರಮವಾಗಿ ಪ್ರವೇಶ ಮಾಡುವುದರ ಮೂಲಕ ಭಾ.ದಂ.ಸಂ.ಕಲಂ 447 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಮನೆಗೆ ಅಕ್ರಮವಾಗಿ ಪ್ರವೇಶ ಮಾಡಿ, ಅನಧಿಕೃತವಾಗಿ ಕಟ್ಟುತ್ತಿದ್ದ ಕಟ್ಟಡವನ್ನು ಸರ್ಕಾರಿ ಕರ್ತವ್ಯ ನಿರತ ಪುರಸಭಾ ಅಧಿಕಾರಿಗಳು ಪೌರ ಕಾರ್ಮಿಕರೊಂದಿಗೆ ಕಟ್ಟಡವನ್ನು ತೆರವುಗೊಳಿಸಲು ಹೋದಾಗ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು, ಸ್ಥಳದಲ್ಲಿ ಅಶಾಂತಿಯುಂಟು ಮಾಡುವುದರ ಮೂಲಕ ಭಾ.ದಂ.ಸಂ.ಕಲಂ 504 ಸಹವಾಚಕ ಕಲಂ 34ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಜಗಳ ತೆಗೆದು, ಸರ್ಕಾರಿ ಕರ್ತವ್ಯ ನಿರತ ಪುರಸಭಾ ಅಧಿಕಾರಿಗಳು ಮತ್ತು ಪೌರ ಕಾರ್ಮಿಕನ್ನು ಕೈಗಳಿಂದ ತಳ್ಳಿ, ಕರ್ತವ್ಯ

ನಿರತ ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡುವುದರ ಮೂಲಕ ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ 34ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಗಳಾದ ನೀವು ಅಪರಾದ ಮಾಡುವ ಸಮಾನ ಉದ್ದೇಶದಿಂದ ಕೂಡಿಕೊಂಡು ಜಗಳ ತೆಗೆದು, ಸರ್ಕಾರಿ ಕರ್ತವ್ಯ ನಿರತ ಪುರಸಭಾ ಅಧಿಕಾರಿಗಳು ಮತ್ತು ಪೌರ ಕಾರ್ಮಿಕನ್ನು ಕೈಗಳಿಂದ ತಳ್ಳಿ, ಕರ್ತವ್ಯ ನಿರತ ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿ ಅವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸುವುದರ ಮೂಲಕ ಭಾ.ದಂ.ಸಂ.ಕಲಂ 353 ಸಹವಾಚಕ ಕಲಂ 34ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲ್ಕಂಡಂತೆ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಿರುತ್ತೇನೆ.

ತಾ : 22/10/2019.

ಸ್ಥಳ : ಹೊಳೆನರಸೀಪುರ

ಜೆಎಂಎಫ್‌ಸಿ, ಹೊಳೆನರಸೀಪುರ.